

ಮಾಡಿದ ಎಸ್. ತಿಪ್ಪೇಸ್ವಾಮಿ ನನ್ನ ಜೂನಿಯರ್ಸ್. ಎಂಜಿನಿಯರಿಂಗ್ ಓದುತ್ತಿದ್ದ ರಮೇಶ್ ಭಟ್ ಕೂಡ ನನ್ನ ವಾರಗೆಯವರಾಗಿದ್ದರು. ಸಿನಿಮಾ ಕನಸು ಕಟ್ಟಿಕೊಂಡೇ ಆಗಿನ ಬಾಂಬೆಗೆ (ಈಗಿನ ಮುಂಬೈ) ಹೊರಡಲು ನಿರ್ಧರಿಸಿದೆ.

◆ **ಮುಂಬೈನಲ್ಲಿ ಸಿನಿಮಾ ಅವಕಾಶ ಸಲೀಸಾಗಿ ಸಿಕ್ಕಿತೇ?**

ಅಲ್ಲಿ ಕೊಡ್ಯಾಕ್‌ನಲ್ಲಿ ಕೃಷ್ಣನ್ ಎಂಬುವವರು ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಅವರೂ ಎಸ್‌ಜೆಪಿಯಲ್ಲಿ ಕಲಿತಿದ್ದವರು. ಅವರ ಸ್ನೇಹಿತರೊಬ್ಬರು ನಾನು ತೆರಳುವ ಮೊದಲೇ ಅವರಿಗೆ ಫೋನ್ ಮಾಡಿದ್ದರು. ನನ್ನ ಕೈಲಿ ಒಂದು ಪತ್ರ ನೀಡಿ, ಅವರನ್ನು ಭೇಟಿ ಮಾಡಲು ಕಳುಹಿಸಿದ್ದರು. ಕೃಷ್ಣನ್ ಅವರು ನೇರವಾಗಿ, 'ಯಾರ ಜೊತೆ ಕೆಲಸ ಮಾಡಬೇಕು ಎಂದು ಬಯಸುತ್ತಿರುವೆ' ಎಂದು ನನ್ನನ್ನು ಕೇಳಿದರು. 'ಶೋಲೆ' ಸಿನಿಮಾ ಸಿನಿಮಾಟೊಗ್ರಫರ್ ಆಗಿದ್ದ ದ್ವಾರಕ್ ದ್ವಿವೇಚಾ, 'ಗೈಡ್' ಸಿನಿಮಾ ಮಾಡಿದ್ದ ಫಾಲಿ ಮಿಸ್ತ್ರಿ, ನನಗೆ ಅವರ ಸಿನಿಮಾಗಳಿಂದ ಹಿಡಿಸಿದ್ದರು. ಕೆಲಸ ಮಾಡಿದರೆ ಅಂತಹವರ ಬಳಿ ಮಾಡಬೇಕು ಎಂದು ನಾನು ಅವರಿಬ್ಬರ ಹೆಸರನ್ನು ಹೇಳಿದೆ. ಇಬ್ಬರ ಬಳಿಯೂ ಅದಾಗಲೇ ಹದಿನಾಲ್ಕು- ಇಪ್ಪತ್ತು ಜನ ಸಹಾಯಕರು ಇದ್ದರು. ಹೀಗಾಗಿ ಅವರಲ್ಲಿ ಕೆಲಸ ಕಲಿಯುವ ಸಾಧ್ಯತೆ ಕಡಿಮೆ ಇದೆ ಎಂದು ಕೃಷ್ಣನ್ ಮನವರಿಕೆ ಮಾಡಿಕೊಟ್ಟರು. ಫಾಲಿ ಮಿಸ್ತ್ರಿ ಅವರಲ್ಲಿ ಡಿ.ಕೆ. ಪ್ರಭಾಕರ್ ಎಂಬ ಇನ್ನೊಬ್ಬರು ಕಲಿಯುತ್ತಿದ್ದರು. ಅವರೂ ಎಸ್‌ಜೆಪಿಯಲ್ಲಿ ಕಲಿತವರು. ಅವರನ್ನೂ ಭೇಟಿ ಮಾಡಿದೆ. ಫಾಲಿ ಮಿಸ್ತ್ರಿ ಅವರ ಬಳಿಗೇ ಕರೆದು ಕೊಂಡು ಹೋದರು. ಅವರಲ್ಲಿಯೂ ಸಾಕಷ್ಟು ಸಹಾಯಕರು ಇದ್ದರು. ದ್ವಾರಕ್, ಮಿಸ್ತ್ರಿ ಇಬ್ಬರಿಗೂ ಕೃಷ್ಣನ್ ಅವರು ಕರೆ ಮಾಡಿ, ಅವಕಾಶ ಇದೆಯೋ ಇಲ್ಲವೋ ಎನ್ನುವುದನ್ನು ಖಾತರಿಪಡಿಸಿಕೊಂಡೇ ನನಗೆ ಹಾಗೆ ತಿಳಿಸಿದ್ದು ಖುಷಿಯಾಗಿತ್ತು.

ಪ್ರಮೋದ್ ಚಕ್ರವರ್ತಿ ಆಗ 'ತುಮ್‌ಸೆ ಅಚ್ಛಾ ಕೌನ್ ಹೈ' ಎಂಬ ಹಿಂದಿ ಸಿನಿಮಾ ಮಾಡುವವರಿದ್ದರು. ಅದಕ್ಕೆ ವಿ.ಕೆ. ಮೂರ್ತಿ ಸಿನಿಮಾಟೊಗ್ರಫರ್. ನಾಯಕಿ ಬಬಿತಾ (ಕರಿಷ್ಮಾ ಕಪೂರ್ ತಾಯಿ) ಅವರಿಗೆ ಅದು ಮೊದಲ ಸಿನಿಮಾ. ಶಮ್ಮಿ ಕಪೂರ್ ನಾಯಕ. ಕನ್ನಡದ ನಟಿ ಜಯಂತಿ ಅವರೂ ಅದರಲ್ಲಿ ಅಭಿನಯಿಸಿದ್ದರು. ಕೃಷ್ಣನ್ ಆಗ ಆ ಸಿನಿಮಾ ವ್ಯವಸ್ಥಾಪಕರಿಗೆ ನೆಗೆಟಿವ್ ಕೊಡುವಾಗ ಸಿನಿಮಾ ಬಗ್ಗೆ ವಿಚಾರಿಸಿಕೊಂಡರು. ವಿ.ಕೆ. ಮೂರ್ತಿ ಕಚೇರಿಗೆ ಹೋಗಿ ಅವರನ್ನು ಭೇಟಿ ಮಾಡುವಂತೆ ಸೂಚಿಸಿದರು. ಕೃಷ್ಣನ್ ಅವರಿಗೂ ಕನ್ನಡ ಬರುತ್ತಿತ್ತು. ಮೂರ್ತಿ ಅವರಂತೂ ಕನ್ನಡಿಗರು. ಐದಾರು ದಿನಗಳಲ್ಲಿ ಸಿನಿಮಾ ಚಿತ್ರೀಕರಣ ಪ್ರಾರಂಭವಾಗಬೇಕಿತ್ತು. ನನಗೆ ಕಲಿಯಲು ಅವಕಾಶ ಕೊಟ್ಟರು.

ಗೋವಿಂದ್ ನಿಹಲಾನಿ ಆ ಸಿನಿಮಾದ ಸಹಾಯಕ ನಿರ್ದೇಶಕ. ಮೊದಲಿಗೆ ಮೂರ್ತಿ ಏನೆಲ್ಲ ಹೇಳಿ ಕೊಡುವರೋ ಅದನ್ನೆಲ್ಲ ಕಲಿಯುವಂತೆ ನನಗೆ ಕಿವಿಮಾತು ಹೇಳಿದರು. ಮೊದಲಿಗೆ ಡಿಮ್ಮರ್ ಕೊಟ್ಟು, ಟ್ರಾಲಿ ಶಾಟ್‌ಗೆ ತಕ್ಕಂತೆ, ಹತ್ತಿರ ಹೋದಾಗ ಬೆಳಕನ್ನು ಡಿಮ್ ಮಾಡಿಕೊಳ್ಳಬೇಕು, ದೂರಕ್ಕೆ ಬಂದಂತೆ ಬ್ರೈಟ್ ಮಾಡಿಕೊಳ್ಳಬೇಕು ಎಂದು ಸೂಚಿಸಿದರು. ಅದಾದ ಮೇಲೆ ಗುರುದತ್ ನಿರ್ದೇಶನದ 'ಶಿಕಾರ್' ಚಿತ್ರೀಕರಣ. ಅದರಲ್ಲೂ ಮೂರ್ತಿ ಅವರೊಟ್ಟಿಗೆ